## ನಿಮ್ಮೊಡನೆ

# ಶಿಬಿರವ್ರೋ ಅಜ್ಜಿಮನೆಯೋ...

ಮಕ್ಕಳು ಏನೆಲ್ಲ ಕಲಿತರೂ ಅಂತಿಮವಾಗಿ ಮಾನವೀಯ ಸ್ಪಂದನಗಳನ್ನು ಉಳಿಸಿಕೊಳ್ಳದೆ ಹೋದರೆ ಎಲ್ಲವೂ ವ್ಯರ್ಥವೇ. ಅಂಥ ಸ್ಪಂದನಗಳಿಗೆ ಸಜ್ಜು ಮಾಡುವ ದೃಷ್ಟಿಯಿಂದಲಾದರೂ ಮಕ್ಕಳನ್ನು ಊರುಕೇರಿಗಳತ್ತ ಮುಖಮಾಡಿಸುವುದು ಸದ್ಯದ ಜರೂರು.



ಈಶ್ವರ

ಬೇಸಿಗೆ ರಜೆಯ ಬೆನ್ನಿಗೆ ಬೇರೆ ಬೇರೆ ಹೆಸರಿನ ಹಲವು ಶಿಬಿರಗಳು ನಗರಗಳಲ್ಲಿ ಆರಂಭವಾಗುತ್ತವೆ. ಇತ್ತೀಚಿನ ವರ್ಷಗಳಲ್ಲಂತೂ ಸಣ್ಣ ಪುಟ್ಟ ಪಟ್ಟಣಗಳಲ್ಲೂ ಮಕ್ಕಳಿಗಾಗಿ ಶಿಬಿರಗಳು ನಡೆಯುತ್ತಿವೆ. ಸಂಗೀತ, ನೃತ್ಯ, ಕರಾಟೆ, ಈಜು, ಚಿತ್ರಕಲೆ, ಫುಟ್‌ಬಾಲ್, ಗಣಿತ, ನಾಟಕ – ಹೀಗೆ ಬೇರೆ ಬೇರೆ ವಿದ್ಯೆಗಳನ್ನು ಹೇಳಿಕೊಡುವ ಆಮಿಷವನ್ನು ಈ ಶಿಬಿರಗಳು ಒಡ್ಡುತ್ತವೆ. ಕೆಲವರಂತೂ ಈ ಕಾಲಕ್ಕೆ ಬಹುಪ್ರಿಯವಾದ ವ್ಯಕ್ತಿತ್ವ ವಿಕಸನದ ಕಮ್ಮಟಗಳನ್ನು ಮಕ್ಕಳಿಗಾಗಿ ಹಮ್ಮಿಕೊಳ್ಳುತ್ತಿದ್ದಾರೆ. ಚಿಣ್ಣರ ಮನೋವಿಕಾಸ ಹಾಗೂ ಮನರಂಜನೆಗೆ ಪೂರಕವಾದ ಕೆಲವು ಶಿಬಿರಗಳನ್ನು ಹೊರತುಪಡಿಸಿದರೆ, ರಜೆಯನ್ನು ಅರ್ಥಪೂರ್ಣಗೊಳಿಸುವ ಉದ್ದೇಶದಿಂದ ನಡೆಯುವ ಬಹುತೇಕ ಕಾರ್ಯಕ್ರಮಗಳ ಮೂಲದಲ್ಲಿರುವುದು ದುಡ್ಡು ಮಾಡುವ ವ್ಯಾಪಾರವಲ್ಲದೆ ಬೇರೇನೂ ಅಲ್ಲ. ಆಯೋಜಕರ ಉದ್ದೇಶ ಏನೇ ಇರಲಿ – ಪ್ರಶ್ನೆ ಇರುವುದು, ಯಾವ ಶಿಬಿರ ಉತ್ತಮ, ಯಾವುದರಿಂದ ಕಾಲಕ್ಷೇಪ ಎಂದು ಗುಣಮಟ್ಟವನ್ನು ನಿರ್ಧರಿಸುವುದರಲ್ಲಿ ಅಲ್ಲ. ಇಂಥ ಶಿಬಿರಗಳು ನಮ್ಮ ಮಕ್ಕಳಿಗೆ ನಿಜವಾಗಿಯೂ ಅಗತ್ಯವೇ ಎನ್ನುವುದು ಪೋಷಕರು ಯೋಚಿಸಬೇಕಾದ ಸಂಗತಿ.

ಸ್ಪರ್ಧಾತ್ಮಕ ಜಗತ್ತಿನ ಹೆಸರಿನಲ್ಲಿ ಮಕ್ಕಳ ಪಾಲಿಗೆ ಶಾಲೆಗಳು ಬಂದೀಖಾನೆಗಳಂತೆ ಪರಿಣಮಿಸಿರುವ ಸಂದರ್ಭವಿದು. ಪ್ರಶ್ನೆಪತ್ರಿಕೆಗಳ ಆಚೆಗಿನ ಯಾವುದೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದ್ದಲ್ಲ ಎನ್ನುವಂತಹ ವಾತಾವರಣದಲ್ಲಿ ಮಕ್ಕಳ ಬಾಲ್ಯ ಆರ್ದ್ರತೆ ಕಳೆದುಕೊಳ್ಳುತ್ತ, ಜಡವಾಗತೊಡಗುತ್ತದೆ. ಶಾಲೆಯಲ್ಲಿನ ಕಲಿಕೆ ಪಠ್ಯಪುಸ್ತಕಗಳಿಗೆ ಸೀಮಿತಗೊಂಡು ಲೋಕವಿವೇಕದ ಅರಿವಿನಿಂದ ಮಕ್ಕಳು ವಂಚಿತರಾಗುತ್ತಾರೆ. ಅಂಕಗಳನ್ನು ಗುಡ್ಡೆ ಹಾಕುವುದೇ ವಿದ್ಯಾರ್ಥಿ ಜೀವನದ ಪರಮಗುರಿಯಾಗಿ, ಎಳೆಯ ಮನಸ್ಸುಗಳು ಒತ್ತಡಕ್ಕೆ ಒಳಗಾಗುತ್ತವೆ. ಶಾಲೆಯಿಂದ ಮನೆಗೆ ಬಂದರೂ ಹೋಂವರ್ಕ್, ಟ್ಯೂಷನ್ ಭೂತಗಳ ಕಾಟ. ಇಂಥ ಬಿಗು ಪರಿಸರದಲ್ಲಿ ಬೆಳೆಯುವ ಮಕ್ಕಳಿಗೆ ಮನಸ್ಸಿನ ಉಲ್ಲಾಸಕ್ಕೆ ವರ್ಷದಲ್ಲಿ ಒದಗಿಬರುವ ಏಕೈಕ ಸಂದರ್ಭ ಬೇಸಿಗೆ ರಜೆಯೆಂಬ ವಸಂತಕಾಲ. ಆದರೆ, ಪೋಷಕರ ಯೋಚನೆಯೇ ಬೇರೆ. ರಜೆಯಲ್ಲೂ ಮಕ್ಕಳು ಏನನ್ನಾದರೂ ಕಲಿಯಬೇಕು, ಕಲಿಯುತ್ತಲೇ ಇರಬೇಕು ಎನ್ನುವ ಅಪೇಕ್ಷೆ ಕೆಲವರದು. ಮತ್ತೆ ಕೆಲವು ಪೋಷಕರು ಮಕ್ಕಳ ಕಾಟದಿಂದ ತಪ್ಪಿಸಿಕೊಳ್ಳಲು ಬೇಸಿಗೆ ಶಿಬಿರಗಳ ಮೊರೆ ಹೋಗುತ್ತಾರೆ.

ಹಿಂದೆಲ್ಲ ಬೇಸಿಗೆ ರಜೆ ಬಂತೆಂದರೆ ಮಕ್ಕಳು ‘ಅಜ್ಜಿಮನೆ’ಯ ದಾರಿ ಹಿಡಿಯುತ್ತಿದ್ದವು. ಅಜ್ಜ–ಅಜ್ಜಿಯ ವಾತ್ಸಲ್ಯ, ಊರುಕೇರಿಯ ಆಪ್ತ ಪರಿಸರ, ಹೊಲಗದ್ದೆಗಳಲ್ಲಿನ ಓಡಾಟ, ಮುಕ್ತ ಪರಿಸರದಲ್ಲಿನ ಆಟ – ಇವೆಲ್ಲವೂ ಮಕ್ಕಳ ರಜೆಯ ಭಾಗವಾಗಿರುತ್ತಿದ್ದವು. ಅಜ್ಜಿ ಹೇಳುತ್ತಿದ್ದ ಕಥೆಗಳು ಮಕ್ಕಳ ಮನೋಲೋಕವನ್ನು ವಿಸ್ತರಿಸುತ್ತಿದ್ದವು. ಪಠ್ಯಪುಸ್ತಕದಾಚೆಗಿನ ಬದುಕನ್ನು, ಸಮಾಜವನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ರಜೆಯ ದಿನಗಳು ಒದಗಿಬರುತ್ತಿದ್ದವು. ಬೇಸಿಗೆ ರಜೆಯ ಆ ದಿನಗಳು ಬಾಲ್ಯವನ್ನು ಮೀರಿ ಜೀವನದುದ್ದಕ್ಕೂ ಜೊತೆಯಾಗುವ ಅನುಭವದ್ರವ್ಯವಾಗುತ್ತಿದ್ದವು. ಇಂದಿನ ಮಕ್ಕಳ ಪರಿಸ್ಥಿತಿಯೇ ಬೇರೆ. ಶಾಲೆಯಿಂದ ಬಿಡುವು ದೊರೆತರೂ, ಅದರ ವಿಸ್ತರಣೆಯಂತೆ ಬೇಸಿಗೆ ಶಿಬಿರಗಳು ಆವರಿಸಿಕೊಳ್ಳುತ್ತವೆ. ಬಯಲಿನ ಅರಿವು, ಅಜ್ಜಿಮನೆಯ ಪ್ರೀತಿಯ ಬೆಚ್ಚನೆ ಅನುಭವ, ಬಯಲು ಶಾಲೆಯ ಕಲಿಕೆಯಿಂದ ಈ ತಲೆಮಾರು ವಂಚಿತವಾಗುತ್ತಿದೆ.

ಮಕ್ಕಳ ಕಲಿಕೆ ನಿರಂತರವಾಗಿರಬೇಕು, ಮಕ್ಕಳು ಹೊಸ ಹೊಸ ವಿಷಯಗಳನ್ನು ಕಲಿಯುತ್ತಿರಬೇಕು ಎನ್ನುವ ಪೋಷಕರ ಅಪೇಕ್ಷೆ ಸರಿ. ಆದರೆ, ಕಲಿಕೆಯ ಸ್ವರೂಪ ಯಾವ ರೂಪದಲ್ಲಿರಬೇಕು ಎನ್ನುವುದನ್ನು ಮಕ್ಕಳ ಹಿತದೃಷ್ಟಿಯಿಂದ ಪೋಷಕರು ಯೋಚಿಸಬೇಕಾದ ಸಂಗತಿ. ತರಗತಿಗಳ ಮುಂದುವರಿಕೆಯ ರೂಪಗಳೇ ಆದ ಶಿಬಿರಗಳು ಮುಖ್ಯವೋ, ಬಂಧುಬಾಂಧವರ ನಡುವೆ ಓಡಾಡಿಕೊಂಡು ಲೋಕಜ್ಞಾನ ಸಂಪಾದಿಸುವುದು ಮುಖ್ಯವೋ ಎನ್ನುವುದರ ನಿರ್ಣಯ ಪೋಷಕರಿಗೇ ಸಂಬಂಧಿಸಿದ್ದು. ನಮ್ಮ ಮಕ್ಕಳು ಏನೆಲ್ಲ ಕಲಿತರೂ, ಎಷ್ಟು ಓದಿದರೂ ಅಂತಿಮವಾಗಿ ಮಾನವೀಯ ಸ್ಪಂದನಗಳನ್ನು ಉಳಿಸಿಕೊಳ್ಳದೆ ಹೋದರೆ ಎಲ್ಲವೂ ವ್ಯರ್ಥವೇ. ಅಂಥ ಸ್ಪಂದನಗಳಿಗೆ ಸಜ್ಜು ಮಾಡುವ ದೃಷ್ಟಿಯಿಂದಲಾದರೂ ಮಕ್ಕಳನ್ನು ಊರುಕೇರಿಗಳತ್ತ ಮುಖಮಾಡಿಸುವುದು ಸದ್ಯದ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದುದು. ಏನನ್ನೂ ಮಾಡದೆ ಒಂದಷ್ಟು ಕಾಲ ಸುಮ್ಮನಿರುವುದೂ ಒಂದು ಕಲೆ ಹಾಗೂ ಒತ್ತಡವನ್ನು ಕಳೆದುಕೊಂಡು ಉತ್ಸಾಹವನ್ನು ನವೀಕರಿಸಿಕೊಳ್ಳುವ ವಿಧಾನ ಎನ್ನುವುದು ನಮಗೆ ಅರ್ಥವಾಗಬೇಕು. ಪಠ್ಯಪುಸ್ತಕಗಳನ್ನು ಬದಿಗಿಟ್ಟು, ಮಕ್ಕಳ ಕೈಗೆ ಕಥೆಯ ಪುಸ್ತಕಗಳನ್ನು ಕೊಡುವುದಕ್ಕೂ ಬೇಸಿಗೆ ಪ್ರಶಸ್ತ ಸಮಯ. ಗಾಂಧಿ–ಅಂಬೇಡ್ಕರರ ಜೀವನಗಾಥೆ, ಪುಣ್ಯಕೋಟಿಯ, ಪಂಚತಂತ್ರ, ರಾಮಾಯಣ, ಮಹಾಭಾರತದ ಕಥೆಗಳನ್ನು ಮಕ್ಕಳು ತಿಳಿಯುವುದಾದರೂ ಯಾವಾಗ?

■ ರಘುನಾಥ ಚ.ಹ.